**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂ:191/2013** **ಡಿ.ಡಬ್ಲೂ: 01**

ಸಾಕ್ಷಿಯನ್ನು ಇಂದು ದಿನಾಂಕ: **04.08.2022** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟಿ ಸವಾಲು:** ವಾದಿ ಪರ ಶ್ರೀ **ಕೆ.ಎಸ್.ಎಂ** ವಕೀಲರಿಂದ:

ವಾದಿಯು ಹಾಕಿರುವ ದಾವೆಯ ಬಗ್ಗೆ ನಾನು ನನ್ನ ವಕೀಲರ ಮುಖಾಂತರ ಕೇಳಿ ತಿಳಿದುಕೊಂಡಿರುತ್ತೇನೆ. ಉಕ್ಕಲಗೆರೆ ಗ್ರಾಮದ ಸರ್ವೆ ನಂ **394** ರಲ್ಲಿ ಒಟ್ಟು **1** ಎಕರೆ **38** ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಸದರಿ ಜಮೀನು ಮೂಲತ: ವಾದಿಯ ಕುಟುಂಬದವರಿಗೆ ಸೇರಿದ ಆಸ್ತಿ ಎಂದರೆ ಸರಿ. ವಾದಿಯ ತಂದೆ ಮಲ್ಲಣ್ಣ ಎಂದರೆ ಸರಿ. ನನಗೆ ಬಸವಣ್ಣನವರು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಬಸವಣ್ಣರವರ ಮಗ ರವಿ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಮಲ್ಲಣ್ಣ ಹಾಗೂ ಬಸವಣ್ಣ ಅಣ್ಣ-ತಮ್ಮಂದಿರು ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಮಲ್ಲಣ್ಣ ಹಾಗೂ ಬಸವಣ್ಣ ರವರು ಸರ್ವೆ ನಂ **394** ರ ಜಮೀನನ್ನು ತಲಾ **39** ಗುಂಟೆಯಂತೆ ಹಂಚಿಕೊಂಡಿದ್ದರು ಎಂದರೆ ಸರಿ. ಮಲ್ಲಣ್ಣನವರ ಭಾಗಕ್ಕೆ ಬಂದ ಸ್ವತ್ತಿನ ಸ್ವಾಧೀನವನ್ನು ಮಲ್ಲಣ್ಣ ಮತ್ತು ಅವರ ಕುಟುಂಬದವರು ಇದ್ದರು ಎಂದರೆ ಸರಿ.

ಈಗ ಮಲ್ಲಣ್ಣರವರು ತೀರಿಕೊಂಡಿರುತ್ತಾರೆ ಎಂದರೆ ಸರಿ. ಸದರಿಯವರು ತೀರಿಕೊಂಡ ನಂತರ ಅವರ ಮಗ ಈ ದಾವೆಯ ವಾದಿ ಜಮೀನಿನ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ. ಬಸವಣ್ಣನವರ ಭಾಗಕ್ಕೆ ಬಂದ ಜಮೀನನ್ನು ಅವರ ಮಗ ರವಿ ರವರ ಮುಖಾಂತರ ನಾನು ಖರೀದಿ ಮಾಡಿರುತ್ತೇನೆ ಎಂದರೆ. ಒಟ್ಟು ಸ್ವತ್ತಿನ ದಕ್ಷಿಣ ಭಾಗಕ್ಕೆ ವಾದಿಯವರ ಸ್ವತ್ತು ಇದೆ ಎಂದರೆ ಸರಿಯಲ್ಲ. ಉತ್ತರ ಭಾಗಕ್ಕೆ ನನ್ನ ಸ್ವತ್ತು ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪಶ್ಚಿಮಕ್ಕೆ ನಮ್ಮ ಜಮೀನು ಇದ್ದು, ನಂತರ ರಸ್ತೆ ಇರುತ್ತದೆ , ಉತ್ತರಕ್ಕೆ ಮಲ್ಲಿಕಾರ್ಜುನರವರ ಜಮೀನು, ದಕ್ಷಿಣಕ್ಕೆ ಕೆರ ಅಂಗಳ , ಪೂರ್ವಕ್ಕೆ ಮಹದೇವಪ್ಪರವರ ಜಮೀನು ಇರುತ್ತದೆ. ನಾನು ಸುಳ್ಳು ಚೆಕ್ಕುಬಂಧಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸ್ವತ್ತಿನ ಪೂರ್ವ ಭಾಗದಲ್ಲಿ ಮಲ್ಲಿಕಾರ್ಜುನರವರ ಸ್ವತ್ತು, ಪಶ್ಚಿಮಕ್ಕೆ ಕೆರೆ ಅಂಗಳ ಇರುತ್ತದೆ ಎಂದರೆ ಸರಿಯಲ್ಲ. ಉತ್ತರಕ್ಕೆ

ಮಲ್ಲಿಕಾರ್ಜುನರವರ ಸ್ವತ್ತು ಎಂದರೆ ಸರಿ. ದಕ್ಷಿಣಕ್ಕೆ ವಾದಿಯ ಸ್ವತ್ತು ಎಂದರೆ ಸರಿಯಲ್ಲ. ವಾದಿಯವರ ಸ್ವತ್ತಿನ ದಕ್ಷಿಣ ಭಾಗಕ್ಕೆ ಕೆರೆ ಅಂಗಳ ಇದೆ ಎಂದರೆ ಸರಿ. ಮಲ್ಲಣ್ಣ ಮತ್ತು ಬಸವಣ್ಣ ಯಾವ ರೀತಿಯಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ ಎನ್ನುವ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇರುವುದಿಲ್ಲ.

ನಾನು ಸ್ವತ್ತನ್ನು ಖರೀದಿ ಮಾಡುವ ಮುನ್ನ ಸರ್ವೆ ಇಲಾಖೆಯಿಂದ ಸ್ವತ್ತನ್ನು ಅಳತೆ ಮಾಡಿಸಿ ಚೆಕ್ಕುಬಂಧಿಯನ್ನು ನಿಗದಿಪಡಿಸಿಕೊಂಡಿರುವುದಿಲ್ಲ. ಸದರಿ ಅಳತೆ ಮಾಡಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ನಾನು ಮೂಲತಃ ಕೇತುಪುರ ಗ್ರಾಮದ ನಿವಾಸಿ ಎಂದರೆ ಸರಿ. ದಾವಾ ಸ್ವತ್ತುಗಳು ಉಕ್ಕಲಗೆರೆ ಗ್ರಾಮದಲ್ಲಿರುತ್ತದೆ ಎಂದರೆ ಸರಿ. ನಾನು ಜಮೀನನ್ನು ಖರೀದಿ ಮಾಡಿದ ದಿನಾಂಕದಿಂದ ಇಂದಿನವರೆಗೂ ಕೇವಲ 39 ಗುಂಟೆ ಜಮೀನಿನ ಸ್ವಾಧೀನದಲ್ಲಿ ಇರುತ್ತೇನೆ ಎಂದರೆ ಸಾಕ್ಷಿಯು ಜಮೀನನ್ನು ಅಳತೆ ಮಾಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಎಷ್ಟು ವಿಸ್ತೀರ್ಣದ ಜಮೀನಿನ ಸ್ವಾಧೀನದಲ್ಲಿ ಇರುತ್ತೇನೆ ಎನ್ನುವುದು ನನಗೆ ಗೊತ್ತಿರುವುದಿಲ್ಲ. ಈ ದಾವೆಯನ್ನು ಹಾಕಿದ ನಂತರ ನಾವು ಎಷ್ಟು ವಿಸ್ತೀರ್ಣದ ಜಮೀನಿನ ಸ್ವಾಧೀನದಲ್ಲಿ ಇರುತ್ತೇನೆ ಎನ್ನುವುದು ತಿಳಿದುಕೊಳ್ಳಲು ಪ್ರಯತ್ನಿಸಿರುತ್ತೇವೆ.

ನನಗೆ ಮಾರಾಟ ಮಾಡಿದ ವ್ಯಕ್ತಿ ಎಷ್ಟು ವಿಸ್ತೀರ್ಣದ ಜಮೀನಿನ ಸ್ವಾಧೀನವನ್ನು ಬಿಟ್ಟುಕೊಟ್ಟಿರುತ್ತಾರೆ ಎನ್ನುವುದು ನನಗೆ ತಿಳಿದಿದೆ. ನಾನು 39 ಗುಂಟೆ ಜಮೀನಿನ ಸ್ವಾಧೀನದಲ್ಲಿ ಇರುತ್ತೇನೆ. ನಾನು ಸಲ್ಲಿಸಿದ ಪ್ರತಿವಾದ ಪತ್ರದ ಅಂಶಗಳನ್ನು ಓದಿಸಿ ತಿಳಿದುಕೊಂಡಿರುತ್ತೇನೆ. ಈ ದಾವೆಯ ವಾದಿ ದಾವಾ-ಎ ಆಸ್ತಿಯಲ್ಲಿ ಬೋರ್‌ವೆಲ್ ಹಾಕಿಸಿ ವಿದ್ಯುತ್ ಸಂಪರ್ಕ ಪಡೆದಿರುತ್ತಾರೆ ಎಂದರೆ ಸಾಕ್ಷಿಯು ಸದರಿ ಬೋರ್‌ವೆಲ್ ನಾವು ಹಾಕಿಸಿರುತ್ತೇವೆ ಎಂದು ನುಡಿಯುತ್ತಾರೆ. ವಿದ್ಯುತ್ ಸರಬರಾಜು ಇಲಾಖೆಯವರು ವಾದಿಯವರಿಗೆ ವಿದ್ಯುತ್ ಸಂಪರ್ಕಕ್ಕೆ ಸಂಬಂಧಿಸಿದಂತೆ ಐ.ಪಿ ಸಂಖ್ಯೆ ನೀಡಿರುತ್ತಾರೆ ಎಂದರೆ ಸರಿ . ಸದರಿ ವಿದ್ಯುತ್ ಸಂಪರ್ಕದಿಂದ ವಾದಿಯವರು ಬೆಳೆ ಬೆಳೆಯುತ್ತಿದ್ದಾರೆ ಎಂದರೆ ಸರಿ. ನಿಪಿ-8 ರಿಂದ ನಿಪಿ-10 ರಲ್ಲಿರುವ ಜಾಗದಲ್ಲೇ ವಾದಿ ಬೋರ್‌ವೆಲ್ ಹಾಕಿಸಿ ಬೆಳೆ ಬೆಳೆಯುತ್ತಿರುವ ಜಾಗ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಬೋರ್‌ವೆಲ್ ನಾವು ಹಾಕಿಸಿರುತ್ತೇವೆ ಎಂದು ನುಡಿಯುತ್ತಾರೆ.

ಸದರಿ ಬೋರ್ವೆಲ್ ಅನ್ನು ವಾದಿಯೇ ಹಾಕಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ನನ್ನ ಜಮೀನಿನಲ್ಲಿ ಹಾಕಿಸಿದ ಬೋರ್ವೆಲ್ ಕೆಟ್ಟು ಹೋಗಿರುತ್ತದೆ ಎಂದರೆ ಸರಿಯಲ್ಲ. ನನಗೆ ಬೆಳೆ ಬೆಳೆಯಲು ನೀರು ಇಲ್ಲದ ಕಾರಣ ವಿದ್ಯುತ್ ಸಂಪರ್ಕ ಪಡೆದುಕೊಂಡು ಕೆರೆಯಿಂದ ಅಕ್ರಮವಾಗಿ ನೀರು ಪಡೆದಿರುತ್ತೇನೆ ಎಂದರೆ ಸಾಕ್ಷಿ ಎಲ್ಲರು ನೀರು ತೆಗೆದುಕೊಂಡಿರುತ್ತಾರೆ ಆದ ಕಾರಣ ನಾವು ತೆಗೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಈ ಸಂಬಂಧವಾಗಿ ನನಗೆ ಗ್ರಾಮ ಪಂಚಾಯಿತಿಯಿಂದ 2013 ರಲ್ಲಿ ಸರ್ಕಾರದ ಹಿಂಗು ಭೂಮಿಯಿಂದ ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದುಕೊಂಡು ನೀರು ಪಡೆದಿರುತ್ತೇನೆ ಎಂದು ನೋಟೀಸು ನೀಡಿರುತ್ತಾರೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ವಾದಿ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**
**ನ್ಯಾಯಾಲಯ ತಿ.ನರಸೀಪುರ.**